# ಕಾಯಕ ಮತ್ತು ಶಿಕ್ಷಣ – ತುಳಿರ್ ಸಂಸ್ಥೆಯ ಅನುಭವಗಳು ಮತ್ತು ಪರ್ಯಾಲೋಚನೆಗಳು

**ಅನು ಮತ್ತು ಕೃಷ್ಣ**



ತುಂಬ ಹಿಂಜರಿಕೆಯಿಂದ ನಮ್ಮ ಬಳಿ ಮಾತನಾಡಲು ಬಂದ ಸೆಲ್ವನ್ (ಹೆಸರು ಬದಲಾಯಿಸಲಾಗಿದೆ), "ನನಗೆ ವಿದ್ಯೆ ಕಲಿಯಬೇಕೆಂಬ ಆಸೆ ಇದೆ. ನೀವು ಸಹಾಯ ಮಾಡುತ್ತೀರಾ?" ಎಂದು ಕೇಳಿದ. "ಹತ್ತನೆ ತರಗತಿಯ ಮಂಡಳಿ ಪರೀಕ್ಷೆಯಲ್ಲಿ ನಾಲ್ಕು ವಿಷಯಗಳಲ್ಲಿ ಫೇಲಾಗಿದ್ದೇನೆ. ನಂತರ ಶಾಲೆ ಕಡೆ ಹೋಗಿಲ್ಲ," ಎಂದು ತಡವರಿಸುತ್ತಾ ತನ್ನ ಕತೆಯನ್ನು ಮುಂದುವರಿಸಿದ. ಹದಿನಾರು ವರುಷದ, ಸಂಕೋಚ ಸ್ವಭಾವದ ಸೆಲ್ವನ್ ತಾನು ಶೈಕ್ಷಣಿಕವಾಗಿ ಯಾವುದಕ್ಕೂ ಲಾಯಕ್ಕಿಲ್ಲದವನು ಎಂದು ಅಂದುಕೊಂಡಿದ್ದ.

ನಮ್ಮ ಶಿಕ್ಷಣವ್ಯವಸ್ಥೆಯಲ್ಲಿ ನಪಾಸು, ನಾಲಾಯಕ್ ಎಂದು ಪರಿಗಣಿಸಲ್ಪಟ್ಟು ಸಮಾಜದಲ್ಲಿ ಹಿಂದೆ ತಳ್ಳಲ್ಪಡುವ ಸಾವಿರಾರು ವಿದ್ಯಾರ್ಥಿಗಳಲ್ಲಿ ಸೆಲ್ವನ್ ಕೂಡ ಒಬ್ಬ. ನಮ್ಮ ದೇಶದ ಔಪಚಾರಿಕ ಶಿಕ್ಷಣ ಪದ್ಧತಿಯು ಶೈಕ್ಷಣಿಕ ಕೌಶಲಗಳ ಬೋಧನೆ ಮತ್ತು ಕಲಿಕೆಗಷ್ಟೇ ಪ್ರಾಧಾನ್ಯತೆ ಕೊಡುತ್ತದೆ. 'ಶೈಕ್ಷಣಿಕ ಕೌಶಲಗಳನ್ನು ಗಳಿಸುವುದರಿಂದ ಮಾತ್ರ ನಾವು ಯಶಸ್ವಿ ವ್ಯಕ್ತಿಗಳಾಗಲು ಸಾಧ್ಯ' ಎಂದು ನಮ್ಮಲ್ಲಿ ಬಿತ್ತಲ್ಪಟ್ಟಿರುವ ನಂಬಿಕೆ ಇದಕ್ಕೆ ಕಾರಣವಿರಬಹುದು. ಸಾಂಪ್ರದಾಯಿಕ ವೃತ್ತಿ ಕೌಶಲಗಳನ್ನು ಕರಗತ ಮಾಡಿಕೊಳ್ಳುವುದಕ್ಕಿಂತಲೂ ಹೆಚ್ಚಾಗಿ ಶೈಕ್ಷಣಿಕ ಅರ್ಹತೆಗಳನ್ನು ಪಡೆಯುವುದು ಮುಖ್ಯವೆಂದು ನಮ್ಮ ಶಿಕ್ಷಣ ವ್ಯವಸ್ಥೆ ಮತ್ತು ಅದರ ಭಾಗವಾಗಿರುವ ಶಿಕ್ಷಕರು ಅತಿಯಾಗಿ ಪ್ರತಿಪಾದಿಸುತ್ತಾರೆ. ಹಾಗಾಗಿ ವೃತ್ತಿಶಿಕ್ಷಣ ಸಂಸ್ಥೆಗಳನ್ನು ಕೇಳುವವರಿಲ್ಲದಂತಾಗಿದೆ. ಅದಕ್ಕೆ ಪ್ರೋತ್ಸಾಹ ನೀಡುವವರೂ ಇಲ್ಲವಾಗಿದೆ.



ನಾವು ಮೂಲತಃ ವಾಸ್ತುಶಿಲ್ಪಿಗಳು. ಸುಮಾರು 25 ವರ್ಷಗಳ ಹಿಂದೆ ನಗರ ಬಿಟ್ಟು ಗ್ರಾಮಾಂತರ ಪ್ರದೇಶವೊಂದರಲ್ಲಿ ಮನೆಮಾಡಿ ಅಲ್ಲಿಯ ಗಾರೆ ಕೆಲಸಗಾರರಿಗೆ ಕಟ್ಟಡ ನಿರ್ಮಾಣದ ಆವಿಷ್ಕೃತ, ಮಣ್ಣಿನಂತಹ ಸ್ಥಳೀಯ ಲಭ್ಯ ವಸ್ತುಗಳನ್ನು ಬಳಸುವ ಪರಿಸರ ಸ್ನೇಹಿ ವಿಧಾನಗಳನ್ನು, ಅದಕ್ಕೆ ಅಗತ್ಯವಾದ ಕೌಶಲಗಳನ್ನು ಕಲಿಸುವುದು ನಮ್ಮ ಉದ್ದೇಶವಾಗಿತ್ತು. ಆಗ ನಮಗೆ ಶೈಕ್ಷಣಿಕ ಮತ್ತು ವೃತ್ತಿ ಶಿಕ್ಷಣದ ನಡುವೆ ಇರುವ ಕಂದಕ ಎಷ್ಟು ದೊಡ್ಡದು ಎಂಬುದು ಮೊದಲ ಬಾರಿಗೆ ಗೊತ್ತಾಯಿತು. ಅಲ್ಲಿಯ ಅನುಭವಿ ಗಾರೆ ಕೆಲಸಗಾರರಿಗೆ ಸ್ಥಳೀಯವಾಗಿ ಲಭ್ಯವಾಗುವ ಮಣ್ಣು ಮತ್ತು ಮತ್ತಿತರ ಸಂಪನ್ಮೂಲಗಳನ್ನು ಬಳಸಿ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ ಯಾವುದೇ ಆಸಕ್ತಿ ಇರಲಿಲ್ಲ. ಹಾಗಾಗಿ ನಾವು ಅನಿವಾರ್ಯವಾಗಿ "ಅಕುಶಲ ಕಾರ್ಮಿಕರು" ಎನ್ನುವಂಥ, ಸ್ಥಳೀಯ ಸಾಮಾಗ್ರಿ ಬಳಸಿ ಸಾಂಪ್ರದಾಯಿಕ ಕಟ್ಟಡ ನಿರ್ಮಾಣದಲ್ಲಿ ನುರಿತ ಯುವಕರನ್ನು ಬಳಸಿ ಕೆಲಸ ಮಾಡಬೇಕಾಯಿತು.

ನಾವು ಮೊದಲಿಗೆ ಅವರಿಗೆ ಸುಧಾರಿತ ಕಟ್ಟಡ ನಿರ್ಮಾಣದ ಘಟಕಗಳನ್ನು ತಯಾರಿಸುವುದನ್ನು ಮತ್ತು ಗಾರೆಕೆಲಸದ ಪ್ರಾಯೋಗಿಕ ಕೌಶಲಗಳನ್ನು ಕಲಿಸಲು ಶುರುಮಾಡಿದೆವು. ನಮ್ಮ ತರಬೇತಿಯಿಂದಾಗಿ ಅವರಿಗೆ ಸ್ವಂತಕ್ಕೆ ಮತ್ತು ತಮ್ಮ ನೆರೆಹೊರೆಯವರಿಗೆ ಅಗತ್ಯವಾದ ಕಟ್ಟಡ ನಿರ್ಮಾಣ ಮಾಡಲು ಮತ್ತು ಆ ಮೂಲಕ ಉತ್ತಮ ಕೂಲಿ ಪಡೆಯಲು ಸಹಕಾರಿಯಾಗುತಿತ್ತು. ಇಷ್ಟು ಅನುಭವ ಪಡೆದುಕೊಂಡರೂ ಕೂಡ ಅವರು ದರ್ಪದ ಕಂಟ್ರಾಕ್ಟರುಗಳ ಅಥವ ಗಾರೆ ಮೇಸ್ತ್ರಿಗಳ ಮುಂದೆ ತಮ್ಮ ಹೊಸ ಕೌಶಲ್ಯಗಳನ್ನು ಬಳಸಲು ಹಿಂಜರಿಯುತ್ತಿದ್ದರು. ತಮಗೆ ತಿಳಿದಿರುವುದನ್ನು ದಿಟ್ಟತೆಯಿಂದ ತೋರಿಸಲು ಹೋಗುತ್ತಿರಲಿಲ್ಲ. ಈ ಹಿಂಜರಿಕೆಯಿಂದ ಅವರನ್ನು ಹೊರತರಲು ಅವರ ಸಾಮರ್ಥ್ಯ ಇನ್ನೂ ವೃದ್ಧಿಯಾಗಬೇಕಿತ್ತು. ಅದಕ್ಕಾಗಿ ಒಂದು ಕಟ್ಟಡ ನಿರ್ಮಾಣಕ್ಕೆ ಬೇಕಾದ ಅಗತ್ಯವಾದ ಸಾಮಗ್ರಿಗಳ ಪ್ರಮಾಣವನ್ನು ಅಳತೆ ಮಾಡುವುದು ಅಥವ ಅಂದಾಜು ಮಾಡುವುದು ಹೇಗೆ, ನಿರ್ಮಾಣ ನಕ್ಷೆಗಳನ್ನು ಬಿಡಿಸುವುದು, ಯೋಜನಾ ನಕ್ಷೆಗಳನ್ನು ಅರ್ಥಮಾಡಿಕೊಳ್ಳುವುದು ಹೇಗೆ, ಇತ್ಯಾದಿ ಕೌಶಲಗಳನ್ನು ನಾವು ಕಲಿಸಲು ನಿರ್ಧರಿಸಿದೆವು. ಇತರ ಕಂಟ್ರಾಕ್ಟರುಗಳು ಅಥವ ಮೇಸ್ತ್ರಿಗಳ ಮೇಲೆ ಅವಲಂಬಿತರಾಗದೆ, ತಾವೇ

ಸಣ್ಣ ಪುಟ್ಟ ಕಾಂಟ್ರಾಕ್ಟುಗಳನ್ನು ಪಡೆದುಕೊಂಡು ನಿರ್ವಹಿಸಿ ಹೆಚ್ಚಿನ ವರಮಾನ ಪಡೆಯಲು ಅವರಿಗೆ ಅಗತ್ಯವಿರುವಷ್ಟು ಓದು, ಬರಹ ಮತ್ತು ಗಣಿತದ ಅವರ ಪರಿಣಿತಿಯನ್ನು ಕೂಡ ಇನ್ನಷ್ಟು ಉತ್ತಮವಾಗಿಸಲು ಪ್ರಯತ್ನಿಸಿದೆವು.

ಇದನ್ನು ನಾವು ಸ್ವಲ್ಪ ಮಟ್ಟಿಗೆ ಸಾಧಿಸಿದೆವು ಕೂಡ. ಆದರೆ 'ನಾವು ಅನಕ್ಷರಸ್ಥರು, ಅಶಿಕ್ಷಿತರು' ಎಂದು ನಮ್ಮ ಕುಶಲಕರ್ಮಿಗಳ ಮನಸ್ಸಿನಲ್ಲಿ ಬೀಡುಬಿಟ್ಟಿರುವ ಕೀಳರಿಮೆಯನ್ನು, ಹಿಂಜರಿಕೆಯನ್ನು, ಅವರ ಆತ್ಮವಿಶ್ವಾಸದ ಕೊರತೆಯನ್ನು ತುಂಬಿಸುವುದು ಸ್ವಲ್ಪ ಕಷ್ಟದ ಕೆಲಸವಾಗಿತ್ತು. 'ತಾವು ಶಾಲೆ ಬಿಟ್ಟವರು ಹಾಗಾಗಿ 'ಲಾಯಕ್ಕಿಲ್ಲದವರು' ಎಂಬ ಪಟ್ಟ ಪಡೆದವರು ಎಂಬ ಸಂಗತಿ, ಅವರ ಕತ್ತಿಗೆ ಕಟ್ಟಿದ ಕಲ್ಲುಗುಂಡಿನಂತೆ ಅವರನ್ನು ಮೇಲಕ್ಕೇಳದಂತೆ ಕೆಳಗೆ ಜಗ್ಗುತ್ತಿತ್ತು. ಇವರೆಲ್ಲ 18 ರಿಂದ 32 ವರ್ಷದ ಪ್ರಾಯದವರು. ತಾವು 'ಅಶಿಕ್ಷಿತರು' ಎಂಬ ಭಾವನೆಯನ್ನು ಅವರು ಮೆಟ್ಟಿನಿಲ್ಲುವಂತೆ ಮಾಡಬೇಕಾದರೆ ನಾವು ಅವರಿಗಿಂತ ಚಿಕ್ಕ ವಯಸ್ಸಿನ ತಂಡದೊಡನೆ ಅವರ ಜೊತೆ, ದೀರ್ಘಕಾಲ ಕೆಲಸ ಮಾಡಬೇಕಾದ ಅವಶ್ಯಕತೆ ಇದೆ ಎಂದು ನಮಗನಿಸಿತು. ಹಾಗಾಗಿ ಕಳೆದ ಹಲವು ವರ್ಷಗಳಿಂದ ನಮ್ಮಲ್ಲಿ ತರಬೇತಿಗೆ ಬರುವವರ ವಯೋಮಿತಿಯನ್ನು ನಾವು ಕಡಿಮೆ ಮಾಡಿದ್ದೇವೆ ಮತ್ತು ಅವರ ತರಬೇತಿಯ ಅವಧಿ ಮತ್ತು ವ್ಯಾಪ್ತಿಯನ್ನು ಹೆಚ್ಚಿಸಿದ್ದೇವೆ.




ಈ ಮೂಲಕವಾಗಿ ಹೊಸ ಕೌಶಲಗಳನ್ನು ಕಲಿಯಲು, ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ತಮಗೆ ಇರುವ ಸಾಮರ್ಥ್ಯದಲ್ಲಿ ಆತ್ಮವಿಶ್ವಾಸವಿಡಲು, ಹಿಡಿದ ಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಮತ್ತು ಒಟ್ಟಾರೆಯಾಗಿ ಉತ್ತಮ ಗುಣಮಟ್ಟದ ಕಟ್ಟಡ ನಿರ್ಮಾಣದ ಸಾಮರ್ಥ್ಯಗಳನ್ನು ಅವರಲ್ಲಿ ಬೆಳೆಸಲು ನಾವು ಸಾಕಷ್ಟು ಮಟ್ಟಿಗೆ ಯಶಸ್ವಿಯಾದೆವು ಎಂದೇ ಹೇಳಬಹುದು. ಅವರ ಗಳಿಕೆಯಲ್ಲಿ ಹೆಚ್ಚಳವಾಯಿತು ಮತ್ತು ದೂರಪ್ರದೇಶಗಳಿಗೆ ಹೋಗಿ, ಇತರ ಸಮುದಾಯದ ಜನರೊಂದಿಗೆ ಕೆಲಸ ಕೈಗೊಳ್ಳಲು ಅಗತ್ಯವಾದ ಆತ್ಮವಿಶ್ವಾಸ ಮತ್ತು ಸಾಮರ್ಥ್ಯ ಕೂಡ ಅವರಲ್ಲಿ ಬೆಳೆಯಿತು. ಆದರೆ, ನಮ್ಮ ಇಷ್ಟೆಲ್ಲ ಪ್ರಯತ್ನದ ಹೊರತಾಗಿಯೂ, ಔಪಚಾರಿಕ ಶಿಕ್ಷಣದ ಕೊರತೆಯಿಂದಾಗಿ ಅವರಿಗೆ ತಮ್ಮ ಬಗ್ಗೆ ತಮಗೇ ಇರುವ ಅಭಿಪ್ರಾಯದ ವಿಷಯದಲ್ಲಿನ ಕೊರತೆ ತುಂಬುವುದು ಸುಲಭ ವಾಗಿರಲಿಲ್ಲ. ದುರಾದೃಷ್ಟಕ್ಕೆ, ಈ ಕುಶಲಕರ್ಮಿಗಳು ಎಷ್ಟೇ ಪ್ರತಿಭಾವಂತರಿದ್ದರೂ ಮತ್ತು ಸಮರ್ಥರಿದ್ದರೂ ನಮ್ಮ ಸಮಾಜ ಕೂಡ ಅವರಿಗೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸಲ್ಲಬೇಕಾದ ಮನ್ನಣೆಯನ್ನು ಸಲ್ಲಿಸುವುದಿಲ್ಲ.

ಈಗ್ಗೆ 10 ವರ್ಷಗಳ ಹಿಂದೆ ಸಿತ್ತಿಲಿಂಗಿ ಎಂಬ ಆದಿವಾಸಿ ಜನಾಂಗ ವಾಸವಾಗಿರುವ ಹಳ್ಳಿಗೆ ನಾವು ನಮ್ಮ ವಾಸ್ತವ್ಯವನ್ನು ಬದಲಾಯಿಸಿದೆವು. ಇಲ್ಲಿ ಮಕ್ಕಳು ಮತ್ತು ವಯಸ್ಕರಿಗಾಗಿ ವಿದ್ಯೆ ಕಲಿಯಲು ಮತ್ತು ಕಲಿಕೆಯಲ್ಲಿರುವ ಖುಶಿಯನ್ನು ಕಂಡುಕೊಳ್ಳುವ ಕಲಿಕಾ ಕೇಂದ್ರವಾಗಿ 'ತುಳಿರ್' (ಕನ್ನಡದಲ್ಲಿ ತಳಿರು) ಎಂಬ ಸಂಸ್ಥೆಯನ್ನು ಸ್ಥಾಪಿಸಿದೆವು. ಶಾಲಾ ಮಕ್ಕಳು ಶಾಲೆಯ ಅವಧಿ ಮುಗಿದ ನಂತರ ಮತ್ತು ವಾರಾಂತ್ಯದಲ್ಲಿ ಅನೌಪಚಾರಿಕವಾಗಿ ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಇಲ್ಲಿ ಅವಕಾಶ ಮಾಡಿಕೊಡಲಾಯಿತು. ಕತೆ ಹೇಳುವುದು, ಓದುವುದು, ಸುಲಭವಾಗಿ ಕಲಿಯಬಹುದಾದ ಭಾಷೆ, ಗಣಿತ ಮತ್ತು ವಿಜ್ಞಾನ ಚಟುವಟಿಕೆಗಳಲ್ಲದೆ, ವಿವಿಧ ಕರಕುಶಲ ತರಗತಿಗಳನ್ನು ಕೂಡ ಇಲ್ಲಿ ನಡೆಸಲಾಗುತ್ತದೆ. ಇಲ್ಲಿ ದಾಖಲಾತಿ, ಹಾಜರಿ, ಶುಲ್ಕ ಇತ್ಯಾದಿಗಳ ಗೋಜಿಲ್ಲದೆ ಇರುವುದರಿಂದ ವಿದ್ಯಾರ್ಥಿಗಳು ತಮ್ಮ ಸ್ವಯಿಚ್ಛೆಯಿಂದ ಬಂದು ಹೋಗಬಹುದು. ವಿದ್ಯಾರ್ಥಿಗಳು ಸ್ವಯಂಪ್ರೇರಿತರಾಗಿದ್ದಾಗ ಮಾತ್ರ ಕಲಿಕೆ ಉತ್ತಮವಾಗಿ ನಡೆಯುತ್ತದೆ ಎಂಬುದು ನಮ್ಮ ನಂಬಿಕೆ.

ತುಳಿರ್ ಸ್ಥಾಪನೆಯಾಗಿ ಒಂದೆರಡು ವರ್ಷಗಳಲ್ಲಿಯೇ ಹದಿನಾಲ್ಕು ವರ್ಷಕ್ಕಿಂತ ಹೆಚ್ಚಿನ ವಯಸ್ಸಿನ ಕೆಲವೊಂದು ಶಾಲೆಬಿಟ್ಟ ಮಕ್ಕಳು ಈ ಕೇಂದ್ರದಲ್ಲಿ ದಿನವಿಡೀ ಸಮಯ ಕಳೆಯಲು ಆರಂಭಿಸಿದರು ಮತ್ತು ತಮಗೆ ಪಾಠ ಹೇಳಿಕೊಡುವಂತೆ ನಮ್ಮನ್ನು ಕೇಳಿಕೊಳ್ಳತೊಡಗಿದರು. ತಮಗೆ ತುಳಿರ್‌ನಲ್ಲಿ ಇರುವುದೇ ಇಷ್ಟವೆಂದೂ, ಶಾಲೆಗೆ ಹೋಗಲು ಇಷ್ಟವಿಲ್ಲವೆಂದೂ ಅವರು ಹೇಳತೊಡಗಿದರು. (8ನೇ ತರಗತಿ ನಂತರ ವ್ಯಾಸಂಗ ಮುಂದುವರಿಸಲು ಅವರಿದ್ದ ಆದಿವಾಸಿ ಊರಿನಲ್ಲಿ ವ್ಯವಸ್ಥೆ ಇರಲಿಲ್ಲ. ಅದಕ್ಕಾಗಿ ಅವರು ದೂರದ ಹಳ್ಳಿಗೆ ಹೋಗಬೇಕಾಗಿತ್ತು.) ಈ ಮಕ್ಕಳ ಶೈಕ್ಷಣಿಕ ಕೌಶಲಗಳು ತುಂಬ ದುರ್ಬಲವಾಗಿದ್ದವು ಅಥವ ಇರಲೇ ಇಲ್ಲ ಎನ್ನಬಹುದು; ವ್ಯವಸ್ಥೆ ಅವರನ್ನು "ನಾಲಾಯಕ್ಕು" ಎಂದು ಪರಿಗಣಿಸಿದ್ದರಿಂದ ಅವರ ಆತ್ಮವಿಶ್ವಾಸ ಪಾತಾಳದಲ್ಲಿತ್ತು. ನಾವು ಹಿಂದೆ ಸೆಲ್ವನ್ ಬಗ್ಗೆ ಮಾತನಾಡಿದ್ದೇವಲ್ಲ, ಅವನು ಕೂಡ ಇವರ ಪೈಕಿ ಒಬ್ಬನಾಗಿದ್ದ. ಹೀಗಿರುವಾಗ ಪ್ರಾಥಮಿಕ ಓದು ಮತು ಬರಹದಿಂದ ಮಾತ್ರ ಅವರ ತರಬೇತಿಯನ್ನು ಆರಂಭಿಸುವುದು ನಮಗೆ ಸೂಕ್ತವಾಗಿ ಕಾಣಿಸಲಿಲ್ಲ. ಹಾಗಾಗಿ ನಾವು ಅವರಿಗೆ ಅವರೇ ಕೈಯಾರೆ ಮಾಡಬಹುದಾದ ಕೆಲಸಗಳನ್ನು ಕೈಗೊಳ್ಳುವ ಅವಕಾಶಗಳನ್ನು ಕಲ್ಪಿಸಿದೆವು.

ಇದರಿಂದಾಗಿ ಅವರಿಗೆ ತಮ್ಮ ಸ್ವಸಾಮರ್ಥ್ಯ ಅರಿವಿಗೆ ಬಂದು ಆತ್ಮವಿಶ್ವಾಸ ಬೆಳೆಯಲು ಅವಕಾಶ ಇತ್ತು. ಇದರ ಜೊತೆಗೆ ಓದು, ಬರಹ ಮತ್ತು ಗಣಿತದ ಕೌಶಲಗಳನ್ನು ಕಲಿಯುವ ಅವಕಾಶಗಳನ್ನು ಕೂಡ ಸೃಷ್ಟಿಸಿದೆವು. ಈ ಯೋಜನಾ ಮಾದರಿ ನಮಗೆ ಹೊಸತಾಗಿರಲಿಲ್ಲ. ನಾವಿದನ್ನು ಹಿಂದೆ ಕಟ್ಟಡ ನಿರ್ಮಾಣ ಕಾರ್ಮಿಕರ ತರಬೇತಿಯಲ್ಲಿ ಅಳವಡಿಸಿದ್ದೆವು.

ಎಲೆಕ್ಟ್ರಿಕಲ್ ವಯರಿಂಗ್ ನಮ್ಮ ಮೊದಲ ತರಬೇತಿ ಯೋಜನೆಯಾಗಿತ್ತು. ಇದೇ ಕೆಲಸ ಏಕೆ ಆಯ್ದುಕೊಂಡೆವೆಂದರೆ, ನಮ್ಮ ಮೊದಲ ಬ್ಯಾಚಿನ ಹೆಚ್ಚಿನ ವಿದ್ಯಾರ್ಥಿಗಳಿಗೆ ಇದರಲ್ಲಿ ಹೆಚ್ಚಿನ ಆಸಕ್ತಿ ಇತ್ತು (ಎಲೆಕ್ಟ್ರಿಕಲ್ ವಯರಿಂಗ್ ಹೆಚ್ಚಿನ ಮರ್ಯಾದೆಯ ಕೆಲಸ ಎಂದು ಅವರು ಭಾವಿಸಿದ್ದರು, ಏಕೆಂದರೆ ಇದರಲ್ಲಿ ಕೈ ಕೆಸರಾಗುವ, ಬಿಸಿಲಲ್ಲಿ ಕೆಲಸ ಮಾಡುವ ಅವಶ್ಯಕತೆ ಇರಲಿಲ್ಲವಲ್ಲ!). ಕಾಕತಾಳೀಯವಾಗಿ ಇದೇ ಹೊತ್ತಿಗೆ ಚೆನ್ನೈನಿಂದ ಒಬ್ಬ ನುರಿತ ಎಲೆಕ್ಟ್ರಿಶಿಯನ್ ಒಬ್ಬರು ನೆರೆಮನೆಯವರೊಬ್ಬರಿಗೆ ಕೆಲಸ ಮಾಡಿಕೊಡಲು ಬಂದರು. ಹಾಗಾಗಿ ತರಬೇತುದಾರರೂ ಕೂಡ ಸಿಕ್ಕಿ, ಈ ಯೋಜನೆ ಸುಲಭವಾಗಿ ಕೈಹಿಡಿಯಿತು. ಇದರ ನಂತರ, ಸರಕಾರೇತರ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಸ್ನೇಹಿತರೊಬ್ಬರು ಬುಡಕಟ್ಟು ಜನಾಂಗದವರಿಗೆ ಜೇನುಸಾಕಣೆಯನ್ನು ಹೇಳಿಕೊಡುವ ಇಂಗಿತವನ್ನು ವ್ಯಕ್ತಪಡಿಸಿದರು. ಹಾಗಾಗಿ ನಾವು ಮುಂದಿನ ಕಾರ್ಯಯೋಜನೆಯಾಗಿ ಜೇನು ಸಾಕಣೆಯನ್ನು ಕೈಗೊಂಡೆವು.



ಮುಂದಿನ ದಿನಗಳಲ್ಲಿ ಕೊಳಾಯಿ ಕೆಲಸ (ಪ್ಲಂಬಿಂಗ್), ಗಾರೆ ಕೆಲಸ, ಬಿದಿರಿನಿಂದ ಪೀಠೋಪಕರಣಗಳನ್ನು ಮಾಡುವುದು, ಸೈಕಲ್ ಮತ್ತು ಮೋಟಾರು ಸೈಕಲ್ ರಿಪೇರಿ, ಸೋಲಾರ್, ಪಿ.ವಿ.ಲೈಟಿಂಗ್, ಎಲ್ಇಡಿ ಬಲ್ಬ್ ಜೋಡಣೆ, ಕಂಪ್ಯೂಟರ್ ತರಬೇತಿ, ಸಾವಯವ ಕೃಷಿ, ಇತ್ಯಾದಿ ಯೋಜನೆಗಳನ್ನು ಕೈಗೆತ್ತಿಕೊಂಡೆವು. ಎಷ್ಟು ಸಾಧ್ಯವೋ ಅಷ್ಟು ಮಟ್ಟಿಗೆ ನಿತ್ಯಜೀವನದಲ್ಲಿ ಉಪಯೋಗಕ್ಕೆ ಬರುವಂತಹ, ಸಮುದಾಯದ ಜನ ಬಳಸಬಹುದಾದಂತಹ ಸೇವೆ ಮತ್ತು ಸೌಕರ್ಯಗಳನ್ನು ಒದಗಿಸುವುದು ನಮ್ಮ ಉದ್ದೇಶವಾಗಿತ್ತು. ಹೀಗೆ ಮಾಡುವುದರಿಂದ ಕೆಲಸಗಾರರಿಗೆ ನಿಜಜೀವನದಲ್ಲಿ ತಮ್ಮ ಕೆಲಸದ ಫಲಶ್ರುತಿಯನ್ನು ಕಣ್ಣಾರೆ ನೋಡಲು, ಅಗತ್ಯ ಹಿಮ್ಮಾಹಿತಿ ಪಡೆದು, ಮುಂದಕ್ಕೆ ಅದನ್ನು ಇನ್ನೂ ಉತ್ತಮ ಪಡಿಸಲು ಸಾಧ್ಯವಾಗುತ್ತದೆ ಮತ್ತು ತಮ್ಮ ಕೆಲಸದ ಬಗ್ಗೆ ತೃಪ್ತಿ ಮತ್ತು ಅಭಿಮಾನವನ್ನು ಬೆಳೆಸುತ್ತದೆ.



ಈ ತರಬೇತಿಯ ಭಾಗವಾಗಿ ಯುವಕರು ತಾವು ಕೈಗೆತ್ತಿಕೊಂಡ ಯೋಜನೆಯ ವಿವರಗಳನ್ನು ಮತ್ತು ದಾಖಲೆಗಳನ್ನು ಬರೆದಿಡುವುದನ್ನು ಮತ್ತು ಅಗತ್ಯ ಲೆಕ್ಕಾಚಾರಗಳನ್ನು ಮಾಡುವುದನ್ನು ಕಲಿತರು. ಉದಾಹರಣೆಗೆ, ಸಾವಯವ ಪದ್ಧತಿಯ ಮೂಲಕ ಅವರು ಭತ್ತ ಬೆಳೆಯುವುದಾಗಿದ್ದರೆ, ಗದ್ದೆಯ ವಿಸ್ತೀರ್ಣವನ್ನು ಅಳೆಯುವುದನ್ನು, ಅದಕ್ಕೆ ಬಳಸಿದ ಮಾನವ ಸಂಪನ್ಮೂಲ ಮತ್ತು ಹೂಡುವಳಿ ಸಾಮಗ್ರಿಗಳ ದಾಖಲೆ ಇಡುವುದನ್ನು, ಭತ್ತದ ಬೆಳವಣಿಗೆಯ ವಿವಿಧ ಹಂತಗಳ ಗ್ರಾಫನ್ನು ಕೈಬರಹದಲ್ಲಿ ಮತ್ತು ಕಂಪ್ಯೂಟರಿನಲ್ಲಿ ದಾಖಲಿಸುವುದನ್ನು, ಲೆಕ್ಕಪತ್ರಗಳನ್ನು ನಿರ್ವಹಿಸುವುದನ್ನು ಕಲಿತರು. ಒಂದು ಗೋಡೆಯನ್ನು ಅವರು ನಿರ್ಮಿಸುತ್ತಿದ್ದರೆ ಅದರಲ್ಲಿ ತೊಡಗಿದವರು ಯೋಜನಾ ನಕ್ಷೆ ರಚಿಸುವುದನ್ನು, ಅಗತ್ಯವಾದ ಇಟ್ಟಿಗೆಗಳ ಪ್ರಮಾಣವನ್ನು ಮತ್ತು ತಗಲಬಹುದಾದ ಖರ್ಚು ವೆಚ್ಚವನ್ನು ಲೆಕ್ಕಮಾಡುವುದನ್ನು ಮತ್ತು ಇತರ ಅಗತ್ಯ ಕೌಶಲಗಳನ್ನು ಕಲಿತರು.

ನಾವು ಉದ್ದೇಶಪೂರ್ವಕವಾಗಿ ವಿವಿಧ ಬಗೆಯ ಮಾಡಿಕಲಿಯಬಹುದಾದ ಯೋಜನೆಗಳನ್ನು ಪ್ರಾರಂಭಿಸಲು ನಮಗೆ ಹಲವು ಪ್ರಮುಖ ಕಾರಣಗಳಿದ್ದವು: ಮೊದಲನೆಯದಾಗಿ, ಒಂದು ಸಮುದಾಯ ಅಥವ ಒಂದು ಜನಪ್ರದೇಶದಲ್ಲಿ ಯಾವುದಾದರೂ ಒಂದೇ ತೆರನಾದ ಚಟುವಟಿಕೆಯನ್ನು ಪುನರಾವರ್ತಿಸುತ್ತಾ ಹೋಗುವುದಕ್ಕೆ ಕೆಲಸದ ಅವಕಾಶಗಳು ಸೀಮಿತವಾಗಿರುತ್ತವೆ. ಎರಡನೆಯದಾಗಿ, ಒಬ್ಬ ಪ್ರಶಿಕ್ಷಣಾರ್ಥಿಯು ಒಂದಕ್ಕಿಂತ ಹೆಚ್ಚು ಕೆಲಸಗಳನ್ನು ಮಾಡುವ ಅವಕಾಶ ಸಿಕ್ಕಿದರೆ ಮುಂದಕ್ಕೆ ಅವನು ತಾನು ಯಾವ ಕೆಲಸವನ್ನು ಸಹಜವಾಗಿ ಚೆನ್ನಾಗಿ ಮಾಡಬಲ್ಲೆ ಎಂಬುದನ್ನು ಗುರುತಿಸಲು ಅಥವಾ

ಯಾವ ಕೆಲಸವನ್ನು ಮುಂದುವರೆಸಿಕೊಂಡು ಹೋಗಲು ತನಗೆ ಆಸಕ್ತಿಯಿದೆ ಎಂದು ಗುರುತಿಸಿ, ಅದರಲ್ಲಿ ಮುಂದುವರಿಯಲು ಸಹಾಯವಾಗುತ್ತದೆ. ಅಷ್ಟೇ ಅಲ್ಲದೆ, ಬೇರೆ ಬೇರೆ ಪ್ರಶಿಕ್ಷಣಾರ್ಥಿಗಳು ತಾವು ಇಷ್ಟಪಟ್ಟಂತೆ ಭಿನ್ನವಾದ ಕೆಲಸಗಳನ್ನು ಆರಿಸಿಕೊಂಡು ಅದೇ ಜನಸಮುದಾಯದಲ್ಲಿ ಕೆಲಸದ ಅವಕಾಶಗಳನ್ನು ಪಡೆಯುವುದು ಸಾಧ್ಯವಾಗುತ್ತದೆ. ಇಲ್ಲವಾದಲ್ಲಿ, ಉದಾಹರಣೆಗೆ ಹೇಳುವುದಾದರೆ, ಎಲ್ಲರಿಗೂ ಗಾರೆ ಕೆಲಸದಲ್ಲಿ ತರಬೇತಿ ನೀಡಿದರೆ, ಸ್ಥಳೀಯವಾಗಿ ಎಲ್ಲರಿಗೂ ಕೆಲಸ ದೊರಕುವುದು ಕಷ್ಟಸಾಧ್ಯ. ಅಷ್ಟೇ ಅಲ್ಲದೆ ಈ ಹುಡುಗರೆಲ್ಲರೂ ಇನ್ನೂ 14ರಿಂದ 18 ವರ್ಷದ ಒಳಗಿನವರಾಗಿದ್ದರಿಂದ, ಯಾವುದಾದರೂ ಒಂದೇ ವೃತ್ತಿಯನ್ನು ತಮ್ಮ ವೃತ್ತಿ ಎಂದು ಗುರುತಿಸುವ ಮಟ್ಟಕ್ಕೆ ಅವರು ಇನ್ನೂ ಬರದೆ ಇರುವ ಸಾಧ್ಯತೆ ಇರುವುದರಿಂದ ಅವರಿಗೆ ತಮ್ಮ ತಮ್ಮ ಆಸಕ್ತಿಯನ್ನು ಗುರುತಿಸಿ, ಅದನ್ನು ಕಲಿತುಕೊಳ್ಳಲು ಇನ್ನು ಸಮಯಾವಕಾಶದ ಅವಶ್ಯಕತೆ ಇದೆ ಎಂದು ನಮಗನಿಸಿತು.

ಸಾಂಪ್ರದಾಯಿಕ ಶಾಲಾ ವಾತಾವರಣದಲ್ಲಿ ವಿದ್ಯಾರ್ಥಿಗಳಿಗೆ ಸಾಮಾನ್ಯವಾಗಿ ಪರಿಣಾಮಕಾರಿಯಾದ ಕೈಕೆಲಸ, ಸಂಗೀತ, ಆಟೋಟ, ಭಾಷಾ ಬಳಕೆ, ಇತರ ಸಂಸ್ಕೃತಿಯ ಜನರೊಂದಿಗೆ ಒಡನಾಟ, ಇತ್ಯಾದಿ ಅವಕಾಶಗಳು ಕಡಿಮೆ. ಹಾಗಾಗಿ ತುಳಿರ್‌ನಲ್ಲಿ ಇಂತಹ ಕಲಿಕಾ ಅವಕಾಶಗಳನ್ನು ಅವರಿಗೆ ಹೆಚ್ಚು ಹೆಚ್ಚು ಒದಗಿಸುವುದು ನಮ್ಮ ಉದ್ದೇಶವಾಗಿತ್ತು. ನಮ್ಮ ಪ್ರಶಿಕ್ಷಣಾರ್ಥಿಗಳು ಒಂದು ವೃತ್ತಿಯನ್ನು ಆಯ್ದುಕೊಂಡ ಮೇಲೆ ಅದರಲ್ಲಿ ವಿಶೇಷ ಪರಿಣತಿಯನ್ನು, ನುರಿತ ವೃತ್ತಿಪರ ನುರಿತ ಕೆಲಸಗಾರರ ಬಳಿ ಸಹಾಯಕರಾಗಿ, ನಿಜ ಜೀವನದ ಪ್ರಾಜೆಕ್ಟುಗಳಲ್ಲಿ ದೀರ್ಘಾವಧಿಯಲ್ಲಿ (ಕೆಲವು ವರ್ಷಗಳಾದರೂ) ಕೆಲಸ ಮಾಡಿಕೊಂಡು ಅವರು ಅಗತ್ಯ ಕೌಶಲಗಳನ್ನು ಕಲಿಯುವ ಅವಕಾಶ ಇತ್ತು. ಸಾಂಪ್ರದಾಯಿಕವಾಗಿ ಕೊಡುವ ಅಲ್ಪಾವಧಿಯ ವೃತ್ತಿತರಬೇತಿಯು ಪರಿಣಾಮಕಾರಿಯಾಗುವುದಿಲ್ಲ ಉಪಯುಕ್ತವೂ ಆಗುವುದಿಲ್ಲ.

ಅತಿ ಸಂಕೋಚದ, ನಮ್ಮನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿ ಮಾತನಾಡಲು ಹಿಂಜರಿಯುತ್ತಿದ್ದ, ತನ್ನ ಶೈಕ್ಷಣಿಕ ಕೌಶಲ್ಯದ ಕೊರತೆ ಚೆನ್ನಾಗಿ ತಿಳಿದಿದ್ದ ಸೆಲ್ವನ್ ಈ ಪ್ರಾಯೋಗಿಕ ಕಲಿಕಾ ವಾತಾವರಣದಲ್ಲಿ ಚೆನ್ನಾಗಿ ಚಿಗುರಿಕೊಂಡ. ಅವನ ಉತ್ತಮ ಗುಣಗಳು ಎದ್ದು ಕಾಣತೊಡಗಿದವು. ಅವನ ನಯ, ವಿನಯ, ಹೃದಯವಂತಿಕೆ ನಮಗೆ ಪರಿಚಯವಾಗತೊಡಗಿತು. ಕೈಗೆಲಸದಲ್ಲಿ ಸೆಲ್ವನ್ನನ್ನು ಮೀರಿಸುವವರು ಇರಲಿಲ್ಲ. ಯಾವುದೇ ಕೆಲಸವಾದರೂ ಹಿಂಜರಿಯದೇ ತೆಗೆದುಕೊಂಡು ಅದನ್ನು ಶ್ರದ್ಧೆಯಿಂದ ಮಾಡುತ್ತಿದ್ದ. ಸಹಕೆಲಸಗಾರರ ಜೊತೆ ಸಹನೆಯಿಂದ ವರ್ತಿಸುತ್ತಿದ್ದ. ಛಾವಣಿ ರಿಪೇರಿ, ಬಿದಿರಿನ ಪೀಠೋಪಕರಣಗಳ ತಯಾರಿಯಂತಹ ದೈಹಿಕ ಶ್ರಮದ ಕೆಲಸಗಳನ್ನು ಎಷ್ಟು ಚೆನ್ನಾಗಿ ಮಾಡುತ್ತಿದ್ದನೋ ಅಷ್ಟೆ ಕುಶಲತೆಯಿಂದ ಮೊಬೈಲ್ ಫೋನುಗಳನ್ನು ರಿಪೇರಿ ಮಾಡುವಂತಹ ಸೂಕ್ಷ್ಮ ಕೆಲಸಗಳನ್ನು ಕೂಡ ಮಾಡುತ್ತಿದ್ದ. ಎಲೆಕ್ಟ್ರಾನಿಕ್ ಉಪಕರಣಗಳನ್ನು ರಿಪೇರಿ ಮಾಡುವುದು ಅವನ ಮೆಚ್ಚಿನ ಕೆಲಸವಾಗಿತ್ತು. ಅದು ತನಗೆ ಪರಿಚಯವೇ ಇಲ್ಲದ ಉಪಕರಣವೇ ಆಗಿದ್ದರು ಕೂಡ, ಅದನ್ನು ಬಿಡಿಸಿ ಮತ್ತೆ ಸರಿಯಾಗಿ ಜೋಡಿಸಿ ಇಡಬಲ್ಲಂತಹ ಸಾಮರ್ಥ್ಯ ಅವನಿಗೆ ಇತ್ತು.

ಪ್ರತಿವರ್ಷ ತುಳಿರ್‌ಗೆ ಇಂತಹ 6 ರಿಂದ 15 ಜನ ವಿದ್ಯಾರ್ಥಿಗಳ ತಂಡಗಳು ಸೇರ್ಪಡೆಯಾಗತೊಡಗಿದವು. ತಾವು ನಪಾಸುಗಳು, ಮಧ್ಯದಲ್ಲೇ ಶಾಲೆ ಬಿಟ್ಟವರು ಎಂಬ ಕೀಳರಿಮೆಯಿಂದ ನರಳುತ್ತಿದ್ದ, ಆತ್ಮವಿಶ್ವಾಸದ ಬದಲಿಗೆ ಭಯ ತುಂಬಿಕೊಂಡು ಬರುತ್ತಿದ್ದ ಈ ಹುಡುಗರು ಬಹುಬೇಗನೆ ಪ್ರಾಯೋಗಿಕ ಕೌಶಲಗಳನ್ನು ಕರಗತಮಾಡಿಕೊಳ್ಳಬಲ್ಲರು ಎಂಬುದು ನಮಗೆ ಅರಿವಾಗತೊಡಗಿತು. ತರಬೇತಿಯ ಫಲವಾಗಿ ಅವರ ಆತ್ಮವಿಶ್ವಾಸವೂ ಕೂಡ ಹೆಚ್ಚಿತು ಮತ್ತು ಶಿಕ್ಷಣದ ಬಗ್ಗೆ ಹೊಸ ಆಸ್ಥೆ ಅವರಲ್ಲಿ ಕಾಣತೊಡಗಿತು. ಹತ್ತನೆ ತರಗತಿಯ ಪರೀಕ್ಷೆ ಪಾಸುಮಾಡುವಂತೆ ಅವರ ಹೆತ್ತವರು ಕೂಡ ಅವರ ಮೇಲೆ ಒತ್ತಡ ಹಾಕತೊಡಗಿದರು. ಅವರಿಗೂ ಕೂಡ ಪರೀಕ್ಷೆ ಪಾಸು ಮಾಡಿ ಹಳ್ಳಿಯಲ್ಲಿ ಸರೀಕರೆದುರು ತಮ್ಮ ಸಾಮರ್ಥ್ಯ ಸಾಬೀತು ಮಾಡಬೇಕು ಎಂಬ ಇಚ್ಛೆ ಪ್ರಬಲವಾಗತೊಡಗಿತು. ಹಾಗಾಗಿ ಅವರಲ್ಲಿ ಒಬ್ಬೊಬ್ಬರೇ ನಮ್ಮ ಸಹಾಯದಿಂದ ಖಾಸಗಿ ಅಭ್ಯರ್ಥಿಗಳಾಗಿ ತಮ್ಮ ಹತ್ತನೆ ತರಗತಿ ಪರೀಕ್ಷೆ ಬರೆದು ಪಾಸುಮಾಡಿಕೊಂಡರು ಕೂಡ. ತುಳಿರ್ ಜೊತೆಗಿನ ಅವರ ಒಡನಾಟ ಅಬಾಧಿತವಾಗಿ ಮುಂದುವರಿದಿತ್ತು.

ತುಳಿರ್‌ಗೆ ಬರಲು ಆರಂಭಿಸಿದ ಮೇಲೆ ಶೈಕ್ಷಣಿಕ ಪರೀಕ್ಷೆಗಳನ್ನು ಬರೆಯಲು ಅವರಲ್ಲಿ ಇರುತ್ತಿದ್ದ ಹಿಂಜರಿಕೆ ಮಾಯವಾಗಿ ಅದರ ಜಾಗದಲ್ಲಿ ಹೊಸ ಆತ್ಮವಿಶ್ವಾಸ ತುಂಬಿಕೊಂಡಿತು. ನಮ್ಮ ಹಳ್ಳಿಯಲ್ಲಿ ಯಾವುದೇ ಪದವಿಪೂರ್ವ ಶಿಕ್ಷಣ ಸಂಸ್ಥೆಗಳು ಇಲ್ಲದ ಕಾರಣ, ನಮ್ಮ ಹಲವು ವಿದ್ಯಾರ್ಥಿಗಳು ದೂರದ ಊರುಗಳಿಗೆ ದಿನವೂ ಪ್ರಯಾಣಿಸಿ, ತಮ್ಮ ಪದವಿಪೂರ್ವ ಶಿಕ್ಷಣವನ್ನು ಮುಂದುವರಿಸಿದರು, ಅದೂ ಕೂಡ ತಮ್ಮ 19 –20ನೇ ವರ್ಷಕ್ಕೆ! ಇವರಲ್ಲಿ ಹಲವು ಮಂದಿ ಪದವಿ ಶಿಕ್ಷಣಕ್ಕಾಗಿ ಕಾಲೇಜು ಕೂಡ ಸೇರಿಕೊಂಡರು.

ನಮ್ಮ ಕೆಲವು ವಿದ್ಯಾರ್ಥಿಗಳು ಕೌಟುಂಬಿಕ ಹೊಲಗದ್ದೆಗಳಲ್ಲಿ ವ್ಯವಸಾಯ ಮುಂದುವರಿಸಲು ಮನೆಗೆ ಮರಳಬೇಕಾಯಿತು. ತೀವ್ರ ಆರ್ಥಿಕ ಮುಗ್ಗಟ್ಟಿದ್ದ ಕುಟುಂಬದಿಂದ ಬಂದ ಕೆಲ ಹುಡುಗರು ಬೇರೆ ಕಡೆ ಅಕುಶಲ ಕೆಲಸಗಾರರಾಗಿ ಕೆಲಸಕ್ಕೆ ಹೋಗಬೇಕಾಯಿತು. ಇನ್ನು ಕೆಲವರು ಗಾರೆ ಕೆಲಸಗಾರರಾಗಿ, ಬಡಗಿಗಳಾಗಿ ವೃತ್ತಿ ಆರಂಭಿಸಿದರು. ಸೆಲ್ವನ್ ಸೇರಿದಂತೆ ನಮ್ಮ ನಾಲ್ವರು ವಿದ್ಯಾರ್ಥಿಗಳು ತುಳಿರ್ ಸಿಬ್ಬಂದಿಗಳಾಗಿ ಸೇರಿಕೊಂಡರು. ಹೊಸ ಪ್ರಶಿಕ್ಷಣಾರ್ಥಿಗಳಿಗೆ ತರಬೇತಿ,

ಸಂಸ್ಥೆಯ ಆಡಳಿತ ಮತ್ತು ನಿರ್ವಹಣೆಯ ಜವಾಬ್ದಾರಿಯ ಹೊಣೆಯನ್ನು ಇವರು ವಹಿಸಿಕೊಂಡರು.

ಕಳೆದ ಹಲವಾರು ವರ್ಷಗಳಲ್ಲಿ ಹಳ್ಳಿಯಲ್ಲಿ ಸಾಕಷ್ಟು ಬದಲಾವಣೆ ಆಗಿದೆ. ತಮ್ಮ ಆಹಾರ ವಸ್ತುಗಳನ್ನು (ಹೆಚ್ಚಾಗಿ ಮಳೆಯಾಧಾರಿತ ಬೆಳೆಗಳಾದ ಸಿರಿಧಾನ್ಯಗಳು, ಕೋಳಿ, ಆಡು, ಇತ್ಯಾದಿ) ತಾವೇ ಬೆಳೆಯುತ್ತಿದ್ದ ರೈತರು, ಈಗ ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿ ದೊರಕುವ ಅಕ್ಕಿಯ ಮೇಲೆ ಅವಲಂಬಿತರಾಗಿದ್ದಾರೆ ಹೆಚ್ಚು ನೀರಿನ ಅವಶ್ಯಕತೆ ಇರುವ ವಾಣಿಜ್ಯ ಬೆಳೆಗಳನ್ನು ಬೆಳೆಯುವಲ್ಲಿ ಉತ್ಸುಕರಾಗಿದ್ದಾರೆ. ಖಾಸಗಿ ಶಾಲೆ, ಕಾಲೇಜುಗಳಿಗೆ ಪ್ರವೇಶಾವಕಾಶ, ಆರೋಗ್ಯ ಸೇವೆ, ಮೋಟಾರ್ ಬೈಕು, ಟ್ರಾಕ್ಟರ್ ಖರೀದಿ, ಇತ್ಯಾದಿಗಳಿಗೆ ಸಾಲದ ಸೌಕರ್ಯ ಹೆಚ್ಚಾಗುವುದರೊಂದಿಗೆ ಅವರ ಹಣಕಾಸಿನ ಅವಶ್ಯಕತೆಯೂ ಹೆಚ್ಚಾಗಿದೆ. ಪದವಿ ಶಿಕ್ಷಣವು ಉತ್ತಮ ಕೆಲಸ (ಸಾಮಾನ್ಯವಾಗಿ ಸರಕಾರಿ ಕೆಲಸ) ಕೊಡಿಸಬಲ್ಲುದು ಎಂಬ ನಂಬಿಕೆ ಸಮುದಾಯದ ಜನರಲ್ಲಿ ಬಲವಾಗಿದೆ. ಖಾಸಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳು ಮತ್ತು ದೂರದಲ್ಲಿರುವ (ಸುಮಾರು 70 ಕಿ.ಮೀ) ಖಾಸಗಿ ಕಾಲೇಜುಗಳು ಕೂಡ ಜೋರು ಪ್ರಚಾರ ನಡೆಸಿದ್ದು, ವಿದ್ಯಾರ್ಥಿಗಳನ್ನು ಆಕರ್ಷಿಸಲು ವಿದ್ಯಾರ್ಥಿಗಳ ಮನೆಬಾಗಿಲಿಗೆ ಬಸ್ ಸೇವೆಯನ್ನು ಕೂಡ ಒದಗಿಸಿವೆ. ವೃತ್ತಿ ಕೌಶಲ ಕಲಿಯುವ ಆಸಕ್ತಿ ಯಾರಲ್ಲೂ ಉಳಿದಿಲ್ಲ.

ಬಿಳಿ ಕಾಲರ್ ಹುದ್ದೆಗಳು ಮಾತ್ರ ಮರ್ಯಾದೆಯನ್ನು ತಂದುಕೊಡಬಲ್ಲವು, ಕೈಕೆಲಸ ಏನಿದ್ದರೂ ಕೈಲಾಗದವರಿಗೆ ಮಾತ್ರ ಎಂಬ ಭಾವನೆಯನ್ನು ಶಾಲಾ ಶಿಕ್ಷಣ ವಿದ್ಯಾರ್ಥಿಗಳಲ್ಲಿ ಮತ್ತು ಅವರ ಪೋಷಕರಲ್ಲಿ ತುಂಬುತ್ತಿದೆ. ಹಾಗಾಗಿ ವೃತ್ತಿ ಶಿಕ್ಷಣಕ್ಕಾಗಿ ಇರುವಂತಹ ಐಟಿಐ ಅಥವ ನಮ್ಮ ತರಹದ ಸಂಸ್ಥೆಗಳಿಗೆ ಬರುವ ಶಿಕ್ಷಣಾರ್ಥಿಗಳ ಸಂಖ್ಯೆ ಬಹಳ ಕಡಿಮೆ. ಇಷ್ಟಲ್ಲದೆ ಎಲ್ಲ ತರಹದ ಪದವಿಗಳನ್ನು ಕೊಡಮಾಡುವಂತಹ ಕಾಲೇಜುಗಳು ನಾಯಿಕೊಡೆಗಳಂತೆ ನೂರಾರು ಸಂಖ್ಯೆಯಲ್ಲಿ ಹುಟ್ಟಿಕೊಂಡಿರುವ ಕಾರಣಕ್ಕೆ, ಹಣಕಾಸಿನ ಸಾಮರ್ಥ್ಯ ಇರುವ ತಂದೆತಾಯಿಯರು ಪದವಿ ಪಡೆಯಲು ತಮ್ಮ ಮಕ್ಕಳನ್ನು ಈ ಕಾಲೇಜುಗಳಿಗೆ ಸುಲಭವಾಗಿ ಕಳುಹಿಸಬಹುದು. ಬೇಸರದ ಸಂಗತಿಯೆಂದರೆ, ಶಾಲೆಯಿಂದ ತೇರ್ಗಡೆಯಾಗಿ ಬರುವ ಮಕ್ಕಳಲ್ಲಿ ಗಂಭೀರವಾಗಿ ಶೈಕ್ಷಣಿಕ ಪದವಿ ಪಡೆಯುವುದು ಬಿಡಿ, ಐಟಿಐ ಅಂತಹ ತರಬೇತಿ ಪಡೆಯಲು ಅವಶ್ಯಕವಾದ ಶೈಕ್ಷಣಿಕ ಕೌಶಲಗಳು ಕೂಡ ಇಲ್ಲ.

ನಮ್ಮ ಸೆಲ್ವನ್ನನ ಆತ್ಮವಿಶ್ವಾಸ ವೃದ್ಧಿಯಾಗಿದೆ. ಅವನು ಈಗ ಸುತ್ತಮುತ್ತಲಿನಲ್ಲಿ ಅತ್ಯಂತ ಬೇಡಿಕೆಯಲ್ಲಿರುವ ಟೆಕ್ನಿಶಿಯನ್‌ಗಳ ಪೈಕಿ ಒಬ್ಬ. ಆದರೆ ತಾನು ಶೈಕ್ಷಣಿಕವಾಗಿ ಇನ್ನೂ ಸಾಧನೆ ಮಾಡಬೇಕು ಎಂಬ ಆಸೆ ಅವನಲ್ಲಿದೆ. ಹಾಗಾಗಿ ತನ್ನ ಇಪ್ಪತ್ತನೆಯ ವಯಸ್ಸಿಗೆ ನಗರದಲ್ಲಿ ಸಾಕಷ್ಟು ಉತ್ತಮ ಸಂಬಳ ದೊರಕಬಹುದಾಗಿದ್ದ ಎಲೆಕ್ಟ್ರಾನಿಕ್ ಟೆಕ್ನಿಶಿಯನ್ ಕೆಲಸ ಬಿಟ್ಟು ಮತ್ತೆ ತನ್ನ ಪ್ರೌಢಶಾಲಾ ಶಿಕ್ಷಣ ಮುಗಿಸಲು ಹಿಂದಿರುಗಿದ. ಈಗ ಅವನು ತನ್ನ ಕಾಲೇಜು ಶಿಕ್ಷಣ ಮುಂದುವರಿಸುತ್ತಿದ್ದಾನೆ. ಎಷ್ಟೇ ಕಷ್ಟಪಟ್ಟಾದರೂ ಒಂದು ಡಿಗ್ರಿ ಸರ್ಟಿಫಿಕೇಟ್ ಪಡೆಯಬೇಕು ಎಂಬ ಹಠ ಅವನಲ್ಲಿ ಬಲವಾಗಿದೆ. ಈ ಡಿಗ್ರಿ ಸರ್ಟಿಫಿಕೇಟ್ ಎಂಬುದು ಅವನ ಆತ್ಮವಿಶ್ವಾಸಕ್ಕೆ ಮತ್ತು ಸಾಮಾಜಿಕ ಮನ್ನಣೆಗೆ ಅತ್ಯಗತ್ಯ ಎಂದು ಅವನು ಅಂದುಕೊಂಡಿದ್ದಾನೆ.

ಇಂಥ ಪರಿಸ್ಥಿತಿಯಲ್ಲಿ ಶಾಲಾ ಶಿಕ್ಷಣದಲ್ಲಿ ಮಾಡಿಕಲಿಯುವ ಕೆಲಸದ ಕಲಿಕೆಗೆ ಎಷ್ಟು ಅವಕಾಶವಿದೆ ಎಂಬ ಪ್ರಶ್ನೆ ಬರುತ್ತದೆ. ಸಾಮಾನ್ಯವಾಗಿ ಗ್ರಾಮೀಣ ಪರಿಸರದ ಮಕ್ಕಳಲ್ಲಿ, ಆದಿವಾಸಿ ಮಕ್ಕಳಲ್ಲಿ ಅಥವ ಶಿಕ್ಷಣ ಪಡೆಯುತ್ತಿರುವ ಮೊದಲ ಪೀಳಿಗೆಯ ಮಕ್ಕಳಲ್ಲಿ ಕರಕುಶಲತೆ ಹೆಚ್ಚಿರುತ್ತದೆ. ಹಾಗಾಗಿ ಇದು ಅವರಿಗೆ ಶೈಕ್ಷಣಿಕ ವಿಷಯಗಳನ್ನು ಕಲಿಯಲು ಹೆಚ್ಚಿನ ಆತ್ಮವಿಶ್ವಾಸ ಒದಗಿಸುತ್ತದೆ. ನಗರ ಪ್ರದೇಶದ ಮಕ್ಕಳಿಗೆ ಕೈಕೆಲಸ ಮಾಡುವುದು ಕಷ್ಟವೇ ಸರಿ. ಹಾಗಾಗಿ ಅವರು ಅದನ್ನು ಕಲಿಯಲು ಹೆಚ್ಚಿನ ಶ್ರಮ ಪಡಬೇಕಾಗುತ್ತದೆ. ಆದರೆ ಅದನ್ನು ಮಾಡುವುದರಿಂದ ಅವರಿಗೆ ಕಣ್ಣು ತೆರೆಯುತ್ತದೆ. ಸಮಾಜದ ಉಳಿವಿಗೆ ಅಗತ್ಯವಾದ ಕೈಕೆಲಸದ ಬಗ್ಗೆ ಒಂದು ಆರೋಗ್ಯಕರ ಧೋರಣೆ ಅವರಲ್ಲಿ ಮೈಗೂಡುತ್ತದೆ. ಅಷ್ಟೇ ಅಲ್ಲ ಈ ತರಹದ ಕರ ಕುಶಲತೆಯುಳ್ಳವರ ಬಗ್ಗೆ ಅವರಲ್ಲಿ ಗೌರವ ಹೆಚ್ಚುತ್ತದೆ.

ನಮ್ಮ ಸಮಾಜದಲ್ಲಿ ಕೈದುಡಿಮೆಯ ಕೆಲಸಗಳನ್ನು ಕುರಿತು ಇರುವ ಧೋರಣೆ ಬದಲಾಗಬೇಕಾದದ್ದು ಬಹಳ ಮುಖ್ಯ. (ಇದು ಇಂದಿನ ಸಂದರ್ಭದಲ್ಲಿ ಯಂತ್ರಗಳು ಮತ್ತು ಉಪಕರಣಗಳ ನ್ನು ಬಳಸಿ ಕೆಲಸಮಾಡುವಂತಹ ಸಾಮರ್ಥ್ಯ ಅಗತ್ಯವುಳ್ಳ ಎಲ್ಲ ಬಗೆಯ ತಯಾರಿಕೆ ಮತ್ತು ಸೇವಾ ಕೈಗಾರಿಕೆ ಕೆಲಸಗಳನ್ನು ಒಳಗೊಳ್ಳುತ್ತದೆ) ಜೊತೆಗೆ ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಜನರಿಗೆ ತಾವು 'ಉನ್ನತ' ಬಿಳಿಕಾಲರ್ ಹುದ್ದೆ ಪಡೆಯಲಾಗದೇ ಹೋದ ಮಧ್ಯದಲ್ಲೇ ಶಾಲೆಬಿಟ್ಟ ಜನ ಎಂಬ ಕೀಳರಿಮೆ ಮಾಯವಾಗಿ ತಾವು ಸಮಾಜಕ್ಕೆ ಮತ್ತು ಅದರ ಆರ್ಥಿಕತೆಗೆ ತಮ್ಮ ಕೊಡುಗೆ ನೀಡುತ್ತಿರುವಂತಹ ಬಹು ಮುಖ್ಯ ಮತ್ತು ಸಮರ್ಥ ವ್ಯಕ್ತಿಗಳು ಎಂಬ ಭಾವನೆಯಿಂದ ಕೆಲಸ ಮಾಡಲು ಸಾಧ್ಯವಾಗುತ್ತದೆ.

ಇವತ್ತು ಶಾಲೆಗಳು ತಾವಿರುವ ಸಮುದಾಯದ ಜೊತೆ ಸೇರದೆ, ದ್ವೀಪಗಳಂತೆ ಕೆಲಸ ಮಾಡುತ್ತವೆ. ಮಕ್ಕಳಿಗೆ ಸಹಜವಾಗಿ ದೊಡ್ಡವರು ಮಾಡುವ ಕೆಲಸದ ಬಗ್ಗೆ ಕುತೂಹಲ ಇರುತ್ತದೆ ಮತ್ತು ಅದರಲ್ಲಿ ತೊಡಗಿಸಿಕೊಳ್ಳಲು ಅವಕಾಶ ಕೊಟ್ಟಾಗ ಅವರಿಗೆ ತಮ್ಮ ಬಗ್ಗೆ, ತಮ್ಮ ಕೆಲಸದ ಬಗ್ಗೆ ಹೆಮ್ಮೆ ಬೆಳೆಯುತ್ತದೆ. ಶಾಲೆಗಳಿಗೆ ಇರುವ ಅವಶ್ಯಕತೆಗಳು (ಅಂದರೆ ಅವರಿಗೆ ಬೇಕಾದ

ಸಂಪನ್ಮೂಲಗಳು ಮತ್ತು ಅಗತ್ಯವಾದ ಸೇವೆಗಳು) ಅವರನ್ನು ತಾವಿರುವ ಸಮುದಾಯದ ಸಂಪರ್ಕಕ್ಕೆ ಸಹಜವಾಗಿಯೇ ತರುತ್ತಿರುತ್ತವೆ. ವಿದ್ಯಾರ್ಥಿಗಳು ತಮ್ಮ ಸಮುದಾಯ ಮತ್ತು ಅಲ್ಲಿನ ಹಿರಿಯರು ತೊಡಗಿಸಿಕೊಂಡಿರುವ ಕೆಲಸದಲ್ಲಿ ಭಾಗಿಯಾಗಿ ಕಲಿಯಲು ಇವು ಸದವಕಾಶಗಳಾಗಬಹುದು. ಗಾಂಧೀಜಿ ಮತ್ತು ವಿನೋಭಾ ಅವರಂತಹ ಅನೇಕ ಚಿಂತಕರು ಬಹಳ ಹಿಂದೆಯೇ ಶಾಲಾ ಶಿಕ್ಷಣ ಮತ್ತು ಕೆಲಸವನ್ನು ಒಗ್ಗೂಡಿಸುವ ಅವಶ್ಯಕತೆಯ ಬಗ್ಗೆ ಮಾತನಾಡಿದ್ದರು. ಇಂತಹ ಶೈಕ್ಷಣಿಕ ಯೋಜನೆಗಳನ್ನು ಆಗಲೇ ಹಲವಾರು ಕಡೆ, ಉದಾಹರಣೆಗೆ ಪಬಲ್‌ನಲ್ಲಿರುವ ವಿಜ್ಞಾನ ಆಶ್ರಮದಲ್ಲಿ ಪ್ರಯತ್ನಿಸಲಾಗಿದೆ. 'ಕೆಲಸ'ವನ್ನು ಶಾಲೆಗೆ ತರುವ ನಿಟ್ಟಿನಲ್ಲಿ ಪಾಶ್ಚಾತ್ಯ ರಾಷ್ಟ್ರಗಳಲ್ಲೂ ಸಾಕಷ್ಟು ಪ್ರಯತ್ನಗಳನ್ನು ಮಾಡಲಾಗಿದೆ, ಉದಾಹರಣೆಗೆ ಬ್ರಿಟಿಷ್ ಸಂಯುಕ್ತ ಸಂಸ್ಥಾನದಲ್ಲಿ ಮಾಡಿರುವ 'ಸ್ಟುಡಿಯೊ ಸ್ಕೂಲ್' ಪ್ರಯತ್ನ, ಮತ್ತು ಫಿನ್‌ಲ್ಯಾಂಡ್‌ನಲ್ಲಿ ವೃತ್ತಿತರಬೇತಿಯನ್ನು ಮುಖ್ಯವಾಹಿನಿ ಶಾಲೆಗಳಲ್ಲಿ ಅಳವಡಿಸಿರುವುದು. ಈಗ ನಮ್ಮ ದೇಶದಲ್ಲೂ ಇದನ್ನು ಗಂಭೀರವಾಗಿ ಪರಿಗಣಿಸಬೇಕಾದ ಅವಶ್ಯಕತೆ ಇದೆ.

ನಮ್ಮ ಶಾಲಾ ಶಿಕ್ಷಣವು ಇಂದು ನಮ್ಮ ಬೌದ್ಧಿಕ ಕೌಶಲವನ್ನು ಹರಿತಗೊಳಿಸುವ ನಿಟ್ಟಿನಲ್ಲಷ್ಟೆ ಕೇಂದ್ರಿತವಾಗಿದೆ. ಹಾಗಾಗಿ ಗ್ರಾಮೀಣ, ಆದಿವಾಸಿ ಮತ್ತು ಮೊದಲ ಪೀಳಿಗೆಯ ಶಿಕ್ಷಣಾರ್ಥಿಗಳು ಈ ವ್ಯವಸ್ಥೆಯಲ್ಲಿ ಬಹಳ ಅನನುಕೂಲ ಸ್ಥಿತಿಯಲ್ಲಿರುತ್ತಾರೆ. ಶಿಕ್ಷಣವು 'ಬುದ್ಧಿ, ಭಾವನೆ ಮತ್ತು ದುಡಿಮೆ' ಈ ಮೂರನ್ನು ಕೂಡ ಒಳಗೊಂಡಿರಬೇಕು. ಶಾಲಾ ಶಿಕ್ಷಣವು ಶೈಕ್ಷಣಿಕ ಕೌಶಲಗಳು, ಕಲೆ, ಕರಕುಶಲತೆ, ಆಟೋಟ ಮತ್ತು ಸಮುದಾಯದ ಕೆಲಸ ಎಲ್ಲದಕ್ಕೂ ಸಮಾನ ಪ್ರಾಮುಖ್ಯತೆ ಕೊಡಬೇಕು.

ಮಾಡಿ ಕಲಿಯುವ ಪ್ರಾಯೋಗಿಕ ಕೆಲಸ ಶಾಲಾ ಶಿಕ್ಷಣದ ಅವಿಭಾಜ್ಯ ಅಂಗವಾಗಿರುವ ಒಂದು ಜಗತ್ತನ್ನು ಊಹಿಸಿಕೊಳ್ಳಿ. ಶಾಲೆ ಅಥವ ಸಮುದಾಯದ ಅವಶ್ಯಕತೆಗಳಿಂದ ಪ್ರೇರಿತವಾದ ನಿಜಜೀವನದ ಯೋಜನೆಗಳು ಶಾಲಾ ಪಠ್ಯದ ಭಾಗವಾಗಿದ್ದರೆ ಹೇಗಿರುತ್ತದೆ? ಪ್ರಾಯೋಗಿಕ ಕೆಲಸ 'ಸಮಾನಕಾರಿ'ಯ ಪಾತ್ರವನ್ನು ವಹಿಸುತ್ತದೆ. ಇದರಿಂದಾಗಿ ನಮ್ಮ ಶಿಕ್ಷಣವ್ಯವಸ್ಥೆಯಲ್ಲಿ ಹೆಚ್ಚಿನ ಸಮತೋಲನ ಸಾಧ್ಯವಾಗಿ ಎಲ್ಲಾ ಸ್ತರದ ಜನರಿಗೂ ನ್ಯಾಯ ಒದಗಿಸುತ್ತದೆ. ಶಾಲೆಯು ಸಮುದಾಯದಲ್ಲಿ ಬೇರೂರುತ್ತದೆ. ಇಂಥ ಒಂದು ಸಮಾನ ಸಮಾಜದಲ್ಲಿ, ನಮ್ಮ ದೇಶದ ಸೆಲ್ವನ್ ತರಹದವರು ತಾವು ಕೀಳು ಎಂಬ ಭಾವನೆಯಲ್ಲಿ ನರಳಿಕೊಂಡು, ಎರಡು ವಿಭಿನ್ನ ಜಗತ್ತುಗಳಲ್ಲಿ ಏಗಬೇಕಾದ ಅನಿವಾರ್ಯತೆ ಇರದೆ, ತಮ್ಮ ಆಯ್ಕೆಯ ಕ್ಷೇತ್ರದಲ್ಲಿ ಎಲ್ಲರಿಗೂ ಸಮಾನವಾಗಿ ಬೆಳೆದು ಏಳ್ಗೆ ಕಾಣಬಹುದು!



**ಅನು ಮತ್ತು ಕೃಷ್ಣ,** ವೃತ್ತಿಯಲ್ಲಿ ವಾಸ್ತುಶಿಲ್ಪಿಗಳು. ಕಳೆದ ಇಪ್ಪತ್ತೈದು ವರ್ಷಗಳಿಂದ ಪರ್ಯಾಯ ನಿರ್ಮಾಣ ತಂತ್ರಜ್ಞಾನ, ಗ್ರಾಮೀಣ ಯುವಕರ ಕೌಶಲ ತರಬೇತಿ, ಮತ್ತು ಪರ್ಯಾಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಗ್ರಾಮೀಣ ಸಮುದಾಯಗಳೊಂದಿಗೆ ಕೆಲಸಮಾಡುತ್ತಿದ್ದಾರೆ. ಅವರ **ಮಿಂಚಂಚೆ:** thulir@gmail.com **ಅನುವಾದ:** ರೋಸಿ ಡಿಸೌಜ **ಪರಿಶೀಲನೆ:** ವಿನಯ ವಿಠಲ